ರಾಜ್ಯದಲ್ಲಿ ಹಿಂದೂ ಅಭಿವೃದ್ಧಿ ಮಂಡಳಿ ರಚನೆ

3649 - ಶ್ರೀ ಕೆ. ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಧಾರ್ಮಿಕ ದತ್ತಿ ರಾಜ್ಯ ಸಚಿವರು ದಯವಿಟ್ಟು ಈ ವಿಷಯಗಳನ್ನು ತಿಳಿಸುವರೆ?

1) ವಕ್ಫ್ ಬೋರ್ಡ್ ತರಹ ಹಿಂದೂ ಅಭಿವೃದ್ಧಿಗಾಗಿ ಮಂಡಳಿಯನ್ನು ನೇಮಿಸಲು ಸರ್ಕಾರ ಯೋಚಿಸಿದೆಯೇ?

2) ಹಾಗಿದ್ದಲ್ಲಿ ಈ ಹಿಂದೂ ಅಭಿವೃದ್ಧಿ ಮಂಡಳಿಗೆ ಎಷ್ಟು ಹಣ ಮೀಸಲಿಡಲಾಗಿದೆ.?

ಶ್ರೀ ರಾಜಾ ಅಮರೇಶ್ ನಾಯಕ್ (ಧಾರ್ಮಿಕ ದತ್ತಿ ರಾಜ್ಯ ಸಚಿವರು):

1) ಇಲ್ಲ.

2) ಉದ್ಭವಿಸುವುದಿಲ್ಲ.

ಹಾಸನ ಜಿಲ್ಲೆಯಲ್ಲಿ ಭೂಮಿ ಒತ್ತುವರಿ ಬಗ್ಗೆ

3567 - ಶ್ರೀ ಬಿ. ಹೆಚ್. ಲಕ್ಷ್ಮಯ್ಯ (ಬೇಲೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ ಜಿಲ್ಲೆಯ ಪ್ರತಿ ತಾಲ್ಲೂಕಿನಲ್ಲಿ ಎಷ್ಟು ಎಕರೆ ಸರ್ಕಾರಿ ಭೂಮಿ ಒತ್ತುವರಿಯಾಗಿರುವುದು.

ಆ) ಅದರಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರು ಎಷ್ಟು ಎಕರೆ ಒತ್ತುವರಿ ಮಾಡಿರುವರು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :

ಅ) ಹಾಸನ ಜಿಲ್ಲೆಯ ಪ್ರತಿ ತಾಲ್ಲೂಕಿನಲ್ಲಿ ಸರ್ಕಾರಿ ಭೂಮಿ ಒತ್ತುವರಿಯಾಗಿರುವ ಪ್ರದೇಶದ ವಿವರಗಳು ಕೆಳಕಂಡಂತಿರುತ್ತವೆ:

ತಾಲ್ಲೂಕಿನ ಹೆಸರು	ಒತ್ತುವರಿಯಾಗಿರುವ ವಿಸ್ತೀರ್ಣ ಎಕರೆ ಗುಂಟೆ
1) ಹಾಸನ	12,502 - 00
2) ಅರಸೀಕೆರೆ	19,968 - 00
3) ಚನ್ನರಾಯಪಟ್ಟಣ	11,797 - 00
4) ಹೊಳೆನರಸೀಪುರ	9,685 - 00
5) ಸಕಲೇಶಪುರ	5,133 - 00
6) ಅರಕಲಗೂಡು	6,502 - 00
7) ಬೇಲೂರು	11,834 - 00
8) ಆಲೂರು	9,629 - 00
ಒಟ್ಟು	87,050 - 00

ಆ) ಅದರಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರು ಒತ್ತುವರಿ ಮಾಡಿರುವ ಜಮೀನಿನ ವಿಸ್ತೀರ್ಣ ಕೆಳಕಂಡಂತೆ:

ತಾಲ್ಲೂಕಿನ ಹೆಸರು	ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಒತ್ತುವರಿ ಮಾಡಿರುವ ಜಮೀನಿನ ವಿಸ್ತೀರ್ಣ ಎಕರೆ ಗುಂಟೆ
1) ಹಾಸನ	842 - 00